<u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1093 |
| ಉತ್ತರಿಸುವ ದಿನಾಂಕ | : | 22.02.2024 |
| ಉತ್ತರಿಸುವ ಸಚಿವರು | : | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಾರ್ಮಿಕ ಇಲಾಖೆಯ ವ್ಯಾಪ್ತಿಗೆ ಬರುವ ಕಾರ್ಮಿಕರ ವ್ಯಾಖ್ಯಾನವೇನು; ಕಾರ್ಮಿಕರಿಗೆ ನೀಡಬೇಕಾದ ಮೂಲಭೂತ ಸವಲತ್ತುಗಳು ಯಾವುವು; (ವಿವರ ನೀಡುವುದು) | ಕರ್ನಾಟಕದಲ್ಲಿ ರಾಜ್ಯ ಕಾರ್ಮಿಕ ಇಲಾಖೆಯು 21 (ಇಪ್ಪತ್ತೊಂದು) ಕೇಂದ್ರ ಕಾರ್ಮಿಕ ಕಾಯ್ದೆ ಹಾಗೂ 4 (ನಾಲ್ಕು) ರಾಜ್ಯ ಕಾರ್ಮಿಕ ಕಾಯ್ದೆ, ಹೀಗೆ ಒಟ್ಟು 25 ಕಾರ್ಮಿಕ ಕಾಯ್ದೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಕಾರ್ಮಿಕ/ನೌಕರರಲ್ಲಿ ಪ್ರಧಾನವಾಗಿ ಸಂಘಟಿತ ಮತ್ತು ಅಸಂಘಟಿತ ಎಂಬ ಎರಡು ವರ್ಗವಿದ್ದು, ಅದರಲ್ಲಿ ಕಾರ್ಮಿಕ/ ನೌಕರರಿಗೆ ಸಂಬಂಧಪಟ್ಟಂತೆ ಪ್ರತಿಯೊಂದು ಕಾಯ್ದೆಯಡಿ "ಕಾರ್ಮಿಕ" ಎಂಬ ಪದದ ವ್ಯಾಖ್ಯಾನ ವಿಭಿನ್ನವಾಗಿರುತ್ತದೆ. ಹಾಗಾಗಿ ಏಕ ರೂಪದ ವ್ಯಾಖ್ಯಾನವು ಇರುವುದಿಲ್ಲ. ಸಂಸ್ಥೆ/ ಕೈಗಾರಿಕೆ/ ಕಾರ್ಖಾನೆ, ಅಂಗಡಿ ಮತ್ತು ವಾಣಿಜ್ಯ ಸಂಸ್ಥೆ ಇತ್ಯಾದಿಗಳಲ್ಲಿ "ಕಾರ್ಮಿಕ-ಮಾಲೀಕ" ಪದದ ಪರಿವ್ಯಾಪ್ತಿಯನ್ವಯ ಕೆಲಸ ಮಾಡುವಂತಹ ಅರ್ಹ ಕಾರ್ಮಿಕರು/ ನೌಕರರು ಆಯಾ ಕಾಯ್ದೆಯ ಪ್ರಾವಧಾನಗಳನ್ವಯ ಶಾಸನಾತ್ಮಕ ಸೌಲಭ್ಯ ಪಡೆಯಲು ಅವಕಾಶವಿರುತ್ತದೆ. ಅವುಗಳಲ್ಲಿ ಪ್ರಮುಖವಾಗಿ;<br><br>✓ ಕನಿಷ್ಠ ವೇತನ ಕಾಯ್ದೆ, 1948ರನ್ವಯ ಕನಿಷ್ಠ ವೇತನ ಪಾವತಿಸದೇ ಇರುವ ಉದ್ಯೋಗದಾತರ (ಮೂಲ ಮಾಲೀಕರು/ಗುತ್ತಿಗೆದಾರರ)ವಿರುದ್ಧ ಸಕ್ಷಮ ಪ್ರಾಧಿಕಾರಿಗಳ ಮುಂದೆ ಕ್ಲೇಮ್ ಅರ್ಜಿ ದಾಖಲಿಸಿ, ನಿಯಮಾನುಸಾರ ಅರ್ಹ ಕಾರ್ಮಿಕ/ನೌಕರರು ನಿಗದಿತ ವೇತನ ಪಡೆಯಲು ಅವಕಾಶವಿರುತ್ತದೆ.<br>✓ ವೇತನ ಪಾವತಿ ಕಾಯ್ದೆ, 1936ರನ್ವಯ ನಿಗದಿತ ದಿನಾಂಕಕ್ಕೆ ವೇತನ ಪಾವತಿಸದೇ ಇರುವ ಉದ್ಯೋಗದಾತರ(ಮೂಲ ಮಾಲೀಕರು/ ಗುತ್ತಿಗೆದಾರರ) ವಿರುದ್ಧ ಸಕ್ಷಮ ಪ್ರಾಧಿಕಾರಿಗಳ ಮುಂದೆ ಕ್ಲೇಮ್ ಅರ್ಜಿ ದಾಖಲಿಸಿ, ನಿಯಮಾನುಸಾರ ಅರ್ಹ ಕಾರ್ಮಿಕ/ನೌಕರರು ಪರಿಹಾರ ಪಡೆಯಲು ಅವಕಾಶವಿರುತ್ತದೆ.<br>✓ ಉಪಧನ ಪಾವತಿ ಕಾಯ್ದೆ, 1972ರನ್ವಯ ಅರ್ಹ ಕಾರ್ಮಿಕರು/ ನೌಕರರು ಸರ್ಕಾರದಿಂದ ಅಧಿಸೂಚಿಸಲ್ಪಟ್ಟ ನಿಯಂತ್ರಣಾಧಿಕಾರಿಗಳ ಮುಂದೆ ನಿಗದಿತ ನಮೂನೆಯಲ್ಲಿ ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿ, ಅರ್ಹ ಉಪಧನ ಪಡೆಯಲು ಅವಕಾಶವಿರುತ್ತದೆ.<br>✓ ಹೆರಿಗೆ ಭತ್ಯೆ ಕಾಯ್ದೆ, 1961ರನ್ವಯ ಅರ್ಹ ಮಹಿಳಾ ಕಾರ್ಮಿಕರು/ ನೌಕರರು ಸರ್ಕಾರದಿಂದ ಅಧಿಸೂಚಿಸಲ್ಪಟ್ಟ ಪ್ರಾಧಿಕಾರಿಗಳ ಮುಂದೆ ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿ, ನಿಯಮಾನುಸಾರ ವೇತನ ಸಹಿತ ರಜೆ ಪಡೆಯಲು ಅವಕಾಶವಿರುತ್ತದೆ.<br>✓ ರಾಷ್ಟ್ರೀಯಾ ಹಬ್ಬಗಳು ಮತ್ತು ರಜಾ ದಿನಗಳ ಕಾಯ್ದೆ, 1963ರನ್ವಯ ರಜಾ ಸೌಲಭ್ಯ ಪಡೆಯಲು ಅವಕಾಶವಿರುತ್ತದೆ.<br>✓ ಬೋನಸ್ ಪಾವತಿ ಕಾಯ್ದೆ, 1965ರನ್ವಯ ನಿಯಮಾನುಸಾರ ಬೋನಸ್ ಪಡೆಯಲು ಅವಕಾಶವಿರುತ್ತದೆ. |

| | | |
|---|---|---|
| | | ✓ ಹೀಗೆ ವಿವಿಧ ಕಾಯ್ದೆಗಳಡಿ ಇನ್ನಿತರೆ ಶಾಸನಾತ್ಮಕ ಸೌಲಭ್ಯಗಳನ್ನು ಅರ್ಹ ಕಾರ್ಮಿಕರು/ನೌಕರರು ಪಡೆಯಲು ಅವಕಾಶವಿರುತ್ತದೆ. |
| ಆ) | ಕಾರ್ಮಿಕ ಇಲಾಖೆಯ ನಿಯಮಗಳನುಸಾರ ಕಾರ್ಮಿಕರಿಗೆ ನೀಡಬೇಕಾದ ಸವಲತ್ತುಗಳನ್ನು ನೀಡುತ್ತಿರುವ ಬಗ್ಗೆ ಖಾತರಿಪಡಿಸುವಲ್ಲಿ ಯಾವ ವಿಧಾನಗಳನ್ನು ಸರ್ಕಾರ ಅನುಸರಿಸುತ್ತಿದೆ; ಈ ಕುರಿತು ಆಯಾ ಪ್ರಾಧಿಕಾರಿಗಳಲ್ಲಿ ಎಷ್ಟು ದೂರುಗಳು ದಾಖಲಾಗಿವೆ ಹಾಗೂ ವಿಲೇವಾರಿಯಾಗಿವೆ; (ಜಿಲ್ಲಾವಾರು ಮಾಹಿತಿ ನೀಡುವುದು) | ಕಾರ್ಮಿಕ ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ಕಾರ್ಮಿಕ ಕಾಯ್ದೆಗಳನ್ವಯ ಅರ್ಹ ಕಾರ್ಮಿಕ/ನೌಕರರಿಗೆ ಅನ್ವಯಿಸುವ ಕಾರ್ಮಿಕ ಕಾಯ್ದೆಗಳನ್ವಯ ನೀಡಬೇಕಾದ ಶಾಸನಾತ್ಮಕ ಸೌಲಭ್ಯಗಳನ್ನು ನೀಡದೇ ಇರುವ ಕುರಿತು ದೈನಂದಿನ ತಪಾಸಣಾ ನಡೆಸುವ ಮೂಲಕ ಹಾಗೂ ವಿವಿಧ ಮೂಲಗಳಿಂದ ಸ್ವೀಕೃತವಾಗುವ ದೂರುಗಳ ಮೂಲಕ ಖಾತರಿಪಡಿಸಿಕೊಳ್ಳಲಾಗುವುದು. ತಪಾಸಣಾ ಸಂದರ್ಭದಲ್ಲಿ ಉಲ್ಲಂಘನೆಗಳು ಕಂಡುಬಂದಲ್ಲಿ ಹಾಗೂ ಸದರಿ ವಿಷಯದ ಕುರಿತು ಇಲಾಖೆಯಲ್ಲಿ ದೂರುಗಳು ಸ್ವೀಕೃತವಾದಲ್ಲಿ, ಸದರಿ ದೂರುಗಳಿಗೆ ಸಂಬಂಧಿಸಿದಂತೆ ಕಾರ್ಯವ್ಯಾಪ್ತಿಯ ನಿರೀಕ್ಷಕರು/ ಅಧಿಕಾರಿಗಳು ನಿಯಮಾನುಸಾರ ಪರಿಶೀಲಿಸಿ, ತಪಾಸಣೆ ನಡೆಸಿ, ಉಲ್ಲಂಘನೆಗಳು ಕಂಡುಬಂದಲ್ಲಿ ಸೂಕ್ತ ಕ್ರಮಕೈಗೊಂಡು ಪರಿಹಾರವನ್ನು ಒದಗಿಸಲು ಅಗತ್ಯ ಕ್ರಮವಹಿಸಲಾಗುತ್ತದೆ.<br><br>• ಸದರಿ ವಿಷಯದ ಕುರಿತು ವಿವಿಧ ಕಾರ್ಮಿಕ ಕಾಯ್ದೆಗಳಡಿ ಕಳೆದ 3 ವರ್ಷದ ಅವಧಿಯಲ್ಲಿ ಅಂದರೆ 2021-22, 2022-23 ಮತ್ತು 2023-24 (ಜನವರಿ 2024ರ ಅಂತ್ಯಕ್ಕೆ) ರ ಅವಧಿಯಲ್ಲಿ ಕಾರ್ಮಿಕ ಸಹಾಯವಾಣಿ/ ನೇರವಾಗಿ ಕಾರ್ಮಿಕ ಆಯುಕ್ತಾಲಯದಲ್ಲಿ /ಜನಸ್ಪಂದನ/ IPGRS ಪೋರ್ಟಲ್/ ಇಲಾಖೆಯ ಅಧಿಕೃತ ಇ-ಮೇಲ್ ವಿಳಾಸಗಳಲ್ಲಿ ಹೀಗೆ ಇತ್ಯಾದಿಗಳ ಮೂಲಕ ಒಟ್ಟು 8314 ದೂರುಗಳು ಸ್ವೀಕೃತವಾಗಿರುತ್ತದೆ. ಈ ಸಂಬಂಧ ಒಟ್ಟು 45617 ತಪಾಸಣೆಗಳನ್ನು ಕೈಗೊಳ್ಳಲಾಗಿದ್ದು, ಅವುಗಳಲ್ಲಿ ಒಟ್ಟು 35438 ಉಲ್ಲಂಘನೆಗಳು ಕಂಡುಬಂದಿರುತ್ತದೆ. ಅದರಲ್ಲಿ 28440 ಉಲ್ಲಂಘನೆಗಳನ್ನು ಸರಿಪಡಿಸಿಕೊಳ್ಳಲಾಗಿದ್ದು, ಸರಿಪಡಿಸಿಕೊಳ್ಳದೇ ಇರುವ ಉಲ್ಲಂಘನೆಗಳ ಕುರಿತು ಮಾನ್ಯ ನ್ಯಾಯಾಲಯದಲ್ಲಿ ಒಟ್ಟು 3366 ಮೊಕದ್ದಮೆಗಳನ್ನು ಹೂಡಲಾಗಿರುತ್ತದೆ. ಅವುಗಳಲ್ಲಿ, 1859 ಪ್ರಕರಣಗಳು ವಿಲೇವಾರಿಯಾಗಿದ್ದು, ನ್ಯಾಯಾಲಯವು ಒಟ್ಟು ರೂ. 71.54 ಲಕ್ಷ ಮೊತ್ತದ ದಂಡವನ್ನು ವಿಧಿಸಿರುತ್ತದೆ. ಮಾಹಿತಿಯನ್ನು ಅನುಬಂಧ-1 ರಲ್ಲಿ ಒದಗಿಸಿದೆ.<br><br>• ಸದರಿ ವಿಷಯದ ಕುರಿತು ಇಲಾಖೆ ಅನುಷ್ಠಾನಗೊಳಿಸುತ್ತಿರುವ ವಿವಿಧ ಕಾರ್ಮಿಕ ಕಾಯ್ದೆಗಳಡಿ ಕಳೆದ 3 ವರ್ಷದ ಅವಧಿಯಲ್ಲಿ ಅಂದರೆ 2021-22, 2022-23 ಮತ್ತು 2023-24 (ಜನವರಿ 2024ರ ಅಂತ್ಯಕ್ಕೆ) ರ ಅವಧಿಗಳಲ್ಲಿ ದಾಖಲಾದ ಕ್ಲೇಮ್ ಅರ್ಜಿಗಳ ವಿವರಗಳು ಈ ಕೆಳಕಂಡಂತಿರುತ್ತದೆ;<br><br>**<u>ಕನಿಷ್ಠ ವೇತನ ಪಾವತಿಸದಿರುವ ಪ್ರಕರಣಗಳು:</u>**<br><br>ಕನಿಷ್ಠ ವೇತನ ಕಾಯ್ದೆ, 1948ರಡಿ ಕಳೆದ ಮೂರು ವರ್ಷಗಳಲ್ಲಿ ಒಟ್ಟು 29079 ಕಾರ್ಮಿಕರಿಗೆ ಸಂಬಂಧಿಸಿದಂತೆ ರೂ.16.81 ಕೋಟಿ ಮೊತ್ತದ 10395 ಕ್ಲೇಮ್ ಅರ್ಜಿಗಳನ್ನು ಸಕ್ಷಮ ಪ್ರಾಧಿಕಾರಿಗಳ ಮುಂದೆ ದಾಖಲಿಸಲಾಗಿರುತ್ತದೆ ಹಾಗೂ ಸದರಿ ಪ್ರಾಧಿಕಾರಿಗಳು ಕ್ಲೇಮ್ ಅರ್ಜಿಗಳ ವಿಚಾರಣೆ ನಡೆಸಿ, ಕಳೆದ ಮೂರು ವರ್ಷಗಳಲ್ಲಿ ರೂ.73.54 ಕೋಟಿ ಮೊತ್ತಕ್ಕೆ ಆದೇಶ ಹೊರಡಿಸಿ, ಒಟ್ಟು 6077 ಕ್ಲೇಮ್ ಅರ್ಜಿಗಳನ್ನು ವಿಲೇವಾರಿ ಮಾಡಿ, ರೂ.17.92 ಕೋಟಿ ಗಳನ್ನು ಒಟ್ಟು 11381 ಕಾರ್ಮಿಕರಿಗೆ ವಿತರಿಸಲಾಗಿರುತ್ತದೆ. ಬಾಕಿ |